***<u>Witness present and duly sworn on: 04-02-2026</u>***

***<u>Cross-Examination</u>***: by counsel for respondent No.2

ನನಗೆ ಇಬ್ಬರು ಗಂಡು ಮಕ್ಕಳು ಇದ್ದು, ನನ್ನ ಮೊದಲನೇ ಮಗ ಮದುವೆಯಾಗಿ ಪ್ರತ್ಯೇಕ ವಾಸವಾಗಿರುತ್ತಾರೆ. ನಾನು ಮತ್ತು 2ನೇ ಅರ್ಜಿದಾರ ವ್ಯವಸಾಯ ಮಾಡುತ್ತೇವೆ. ನನ್ನ ಮಗ ಅರುಣ್ ಕುಮಾರ್ ಅಪಘಾತಕ್ಕಿಂತ 1 ವರ್ಷ ಕ್ಕಿಂತ ಮೊದಲಿನಿಂದ 1ನೇ ಎದುರುದಾರರ ಬಳಿ ಚಾಲಕ ವೃತ್ತಿ ಮಾಡುತಿದ್ದ. ಆ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ನನ್ನ ಮಗ 1ನೇ ಎದುರುದಾರರ ಬಳಿ ಚಾಲಕ ಕೆಲಸ ಮಾಡುತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ಮತ್ತು 1ನೇ ಎದುರುದಾರರ ನಡುವೆ ಮಾಲೀಕ ಕಾರ್ಮಿಕ ಸಂಬಂಂಧ ಇರಲಿಲ್ಲ ಎಂದರೆ ಸರಿಯಲ್ಲ.

ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ. 1ನೇ ಎದುರುದಾರ ಪೊಲೀಸರ ಮುಂದೆ ಹೇಳಿಕೆ ನೀಡಿದ ಬಗ್ಗೆ ನನಗೆ ಗೊತಿಲ್ಲ. ನನ್ನ ಮಗ ಅರುಣ್ ಕುಮಾರ್ ಪದವಿಯನ್ನು ಸಂಪೂರ್ಣ ಮಾಡಿರುವುದಿಲ್ಲ. ನನ್ನ ಮಗ transport vehicle ಓಡಿಸಲು ಡಿಎಲ್ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಅಪಘಾತ ನೋಡಿಲ್ಲ. ಅಪಘಾತದ ಬಗ್ಗೆ ಅರುಣ್ ಇವರ ಸ್ನೇಹಿತ ನನಗೆ ಕರೆ ಮಾಡಿ ತಿಳಿಸಿರುತ್ತಾರೆ. ಅರುಣ್ ಕುಮಾರ್ ಇವರ ತಪ್ಪಿ ನಿಂದಲೂ ಅಪಘಾತವಾಗಿದೆ ಎಂದು ಪೊಲೀಸರು ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತಿಲ್ಲ.

ನನ್ನ ಮಗನಿಗೆ 1ನೇ ಎದುರುದಾರ ನಗದು ರೂಪದಲ್ಲಿ ವೇತನ ನೀಡುತಿದ್ದರು. ಆ ಬಗ್ಗೆ ಯಾವುದೇ ದಾಖಲೆ ಇಲ್ಲ. ಅಪಘಾತದ ನಂತರ 1ನೇ ಎದುರುದಾರರಿಗೆ ನಾನು ನೋಟೀಸು ನೀಡಿಲ್ಲ, ಆ ಬಗ್ಗೆ ನನಗೆ ಗೊತಿಲ್ಲ. 1ನೇ ಎದುರುದಾರರ ಬಳಿ ನಾವು ಯಾವುದೇ ಪರಿಹಾರ ಕೇಳಿರುವುದಿಲ್ಲ. ನನ್ನ ಮಗ 1ನೇ ಎದುರುದಾರರ ಬಳಿ ಚಾಲಕನಾಗಿ ಕೆಲಸ ಮಾಡದೇ ಇದ್ದ ಕಾರಣ ಅವರಿಗೆ ನೋಟೀಸು ನೀಡಿರುವುದಿಲ್ಲ ಮತ್ತು ಅವರ ಬಳಿ ಪರಿಹಾರ ಕೇಳಿರುವುದಿಲ್ಲ ಎಂದರೆ ಸರಿಯಲ್ಲ, ನಾವು

ಅಪಘಾತದ ನಂತರ ಆಘಾತದಲ್ಲಿ ಇದ್ದೆವು. ಅಪಘಾತವು ಬಸ್ಸಿನ ಚಾಲಕನ ತಪ್ಪಿ ನಿಂದಲೂ ಆಗಿದೆ ಎಂದರೆ ನನಗೆ ಗೊತಿಲ್ಲ. ನನ್ನ ಮಗನ ಜನ್ಮ ದಿಃ 30-05-2002 ಆಗಿರುತ್ತದೆ. ಅಪಘಾತ ಕಾಲಕ್ಕೆ ನನ್ನ ಮಗನಿಗೆ 25 ವರ್ಷಕ್ಕಿಂತ ಹೆಚ್ಚು ವಯಸ್ಸಾಗಿತ್ತು ಎಂದರೆ ಸರಿಯಲ್ಲ. ನನ್ನ ಮಗನು ಅಪಘಾತದಿಂದ ಮೃತಪಟ್ಟಿಲ್ಲ, ಬೇರೆ ಯಾವುದೋ ಕಾರಣದಿಂದ ಅಪಘಾತವಾಗಿತ್ತು ಎಂದರೆ ಸರಿಯಲ್ಲ. ಶವ ಸಂಸ್ಕಾರ ಮತ್ತು ಸಾಗಾಟಕ್ಕೆ ರೂ.2,50,000/- ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಮಗನು 1ನೇ ಎದುರುದಾರರ ಬಳಿ ಚಾಲಕನಾಗಿ ಕೆಲಸ ಮಾಡದೇ ಇದ್ದ ಕಾರಣ ಎದುರುದಾರರಿಂದ ಪರಿಹಾರ ಪಡೆಯಲು ಅರ್ಹರಾಗಿರುವುದಿಲ್ಲ ಎಂದರೆ ಸರಿಯಲ್ಲ. ಈ ಕೇಸಿಗಾಗಿ ಎಲ್ಲಾ ದಾಖಲೆಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿ ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ.

(ಎದುರುದಾರ ನಂ.3 ಪರ ವಕೀಲರು ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು)

**ಮರುವಿಚಾರಣೆಃ** ಇಲ್ಲ

(Computerized as per my dictation in open court)

R.O.I.&.A.C.

VIII Addl. Judge,
Court of Small Causes,
Bengaluru

ಸಾಕ್ಷಿಯ ಸಹಿಃ